## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 454 |
| ಸದಸ್ಯರ ಹೆಸರು | : ಡಾ. ವೈ.ಎ. ನಾರಾಯಣಸ್ವಾಮಿ. |
| ಉತ್ತರಿಸುವ ಸಚಿವರು | : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 06-03-2020 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಾಧ್ಯಮಗಳ ವರದಿಯ ಪ್ರಕಾರ ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಬಿ.ಎಂ.ಟಿ.ಸಿ ಬಸ್ ಅಪಘಾತಗಳಿಗೆ ಹಳೇ ಬಸ್‌ಗಳ ತಾಂತ್ರಿಕ ದೋಷಗಳೇ ಕಾರಣ ಎನ್ನಲಾಗುತ್ತಿರುವುದು ನಿಜವೇ: (ವಿವರ ನೀಡುವುದು) | ಬೆಂ.ಮ.ಸಾ.ಸಂಸ್ಥೆಯಲ್ಲಿ 2019-20ನೇ ಸಾಲಿನಲ್ಲಿ (ಜನವರಿ 2020 ರವರೆಗೆ) ಒಟ್ಟು 196 ಅಪಘಾತ ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ ಒಂದು ಅಪಘಾತವು ತಾಂತ್ರಿಕ ದೋಷದಿಂದ ಅಪಘಾತ ಉಂಟಾಗಿರುತ್ತದೆ.<br><br>ಸಂಸ್ಥೆಯ ಚಾಲಕರು ಜವಾಬ್ದಾರರಾಗಿರುವ ಅಪಘಾತ ಪ್ರಕರಣಗಳು — 100<br>ಸಂಸ್ಥೆಯ ವಾಹನಗಳ ತಾಂತ್ರಿಕ ದೋಷದಿಂದ ಉಂಟಾದ ಅಪಘಾತ ಪ್ರಕರಣ — 01<br>ಸಂಸ್ಥೆಯ ಚಾಲಕರು ಮತ್ತು ಇತರೆ ರಸ್ತೆ ಬಳಕೆದಾರರೂ ಸಹ ಅಪಘಾತಗಳಿಗೆ ಜವಾಬ್ದಾರರಾಗಿರುವ ಪ್ರಕರಣಗಳು — 60<br>ಸಂಸ್ಥೆಯ ಜವಾಬ್ದಾರರಲ್ಲದ ಪ್ರಕರಣಗಳು — 35 |
| ಆ) | ಇಂತಹ ಅನಾಹುತಗಳನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ/ ತೆಗೆದುಕೊಳ್ಳಲು ಯೋಜಿಸಿರುವ ಕ್ರಮಗಳೇನು : | ಸಂಸ್ಥೆಯ ವಾಹನಗಳಿಂದ ಉಂಟಾಗುವ ಅಪಘಾತಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ-<br>▪ ಸಂಸ್ಥೆಯ ತರಬೇತಿ ಕೇಂದ್ರದಲ್ಲಿ ಚಾಲನಾ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>▪ ಸಂಸ್ಥೆಯ ಅಧಿಕಾರಿಗಳು ಹಾಗೂ ಸಂಚಾರ ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ಘಟಕಗಳಲ್ಲಿ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ<br>▪ ಸಂಸ್ಥೆಯಲ್ಲಿ ಪ್ರತಿ ವರ್ಷ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಯೋಜಿಸಿ ಚಾಲನಾ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಅಪಘಾತಗಳಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>▪ ಸಂಸ್ಥೆಯ ಸಾರಥಿ ಗಸ್ತು ಪಡೆಯ ವಾಹನಗಳ ಮೂಲಕ ಮಾರ್ಗದಲ್ಲಿ ಸಂಚಾರ ಉಲ್ಲಂಘಿಸುವ ಚಾಲಕರ ವಿರುದ್ಧ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.<br>▪ ಘಟಕಗಳಲ್ಲಿ ಚಾಲನಾ ಸಿಬ್ಬಂದಿಗಳಿಗೆ ಕೆಲವು ಆಸ್ಪತ್ರೆಗಳ ಸಹಯೋಗದೊಂದಿಗೆ ಕಣ್ಣಿನ ಪರೀಕ್ಷೆಯ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ.<br>· ಸಂಸ್ಥೆಯಲ್ಲಿ ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ |

| | | |
|---|---|---|
| | | ▪ ಮಾಡಿಕೊಂಡಿದ್ದು ಕಾಲಕಾಲಕ್ಕೆ ಚಾಲನಾ ಸಿಬ್ಬಂದಿಗಳ ಆರೋಗ್ಯ ತಪಾಸಣೆಗೆ ಅವಕಾಶವನ್ನು ಕಲ್ಪಿಸಲಾಗಿದೆ.<br>▪ ಅಪಘಾತರಹಿತ ಚಾಲನೆಗಾಗಿ ಚಾಲಕರಿಗೆ ಬೆಳ್ಳಿ ಪದಕ ಹಾಗೂ ಚಿನ್ನದ ಪದಕಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br>▪ ವಾಹನಗಳನ್ನು ಮುನ್ನೆಚ್ಚರಿಕೆ, ನಿಯತಕಾಲಿಕ ನಿರ್ವಹಣೆಗಳಿಗೆ ಒಳಪಡಿಸಲಾಗುತ್ತಿದೆ.<br>▪ ವಾಹನಗಳ ನಿರ್ವಹಣೆಯಲ್ಲಿನ ನ್ಯೂನ್ಯತೆಯ ಸಂಬಂಧ ಅರಿವು ಮೂಡಿಸಲು ಆಗಿಂದಾಗ್ಗೆ ಅಧಿಕಾರಿಗಳು ಘಟಕಕ್ಕೆ ಭೇಟಿ ನೀಡಿ ತಪಾಸಣೆ ನಡೆಸುತ್ತಿದ್ದು, ತಾಂತ್ರಿಕ ಸಿಬ್ಬಂದಿಗಳನ್ನು ಉದ್ದೇಶಿಸಿ ಚರ್ಚಿಸಲಾಗುತ್ತಿದೆ.<br>▪ ವಾಹನಗಳಲ್ಲಿ ತಾಂತ್ರಿಕವಾಗಿ ತಂತ್ರಜ್ಞಾನದ ಮುಖೇನ ವೇಗವನ್ನು ನಿಯಂತ್ರಿಸಲಾಗಿದೆ.<br>▪ ತಾಂತ್ರಿಕ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ತರಬೇತಿ ಕೇಂದ್ರಗಳಲ್ಲಿ ಸಂಸ್ಥೆಯ ವತಿಯಿಂದ/ ವಾಹನ ತಯಾರಕರಿಂದ ತರಬೇತಿ ಆಯೋಜಿಸಲಾಗುತ್ತಿದೆ.<br>▪ ಉತ್ತಮ ಚಾಲನಾಭ್ಯಾಸ, ಚಾಲನಾ ಕೌಶಲ್ಯಗಳನ್ನು ಉತ್ತಮಪಡಿಸಿಕೊಳ್ಳಲು, ಅನುಸರಿಸುವ ಕ್ರಮದ ಕುರಿತು ಅರಿವು ಮೂಡಿಸುವ ಸಲುವಾಗಿ ಘಟಕ ಮಟ್ಟದಲ್ಲಿ ಪ್ರತಿದಿನ ಚಾಲಕರಿಗೆ ಪಿ.ಸಿ.ಆರ್.ಎ ರವರಿಂದ ತರಬೇತಿ ನೀಡಲಾಗುತ್ತಿದೆ.<br>▪ ಸಂಸ್ಥೆಗೆ ಚಾಲಕರನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿಯೇ 'ಗಣಕೀಕೃತ ಚಾಲನಾ ವೃತ್ತಿ ಪರೀಕ್ಷೆ' ಮಾಡುವ ಮೂಲಕ ನೇಮಕಾತಿ ಮಾಡಲಾಗುತ್ತಿದೆ. |
| ಇ) | ಬಿ.ಎಂ.ಟಿ.ಸಿ ಬಸ್ ಗಳ ಹೆಚ್ಚಳಕ್ಕೆ ಸರ್ಕಾರ ಯೋಜನೆ ಹಾಕಿದೆಯೇ, ಹಾಗಿದ್ದಲ್ಲಿ ಅದರ ವಿವರಗಳನ್ನು ನೀಡುವುದು | 2019-20ನೇ ಸಾಲಿನಲ್ಲಿ 347 ವಾಹನಗಳನ್ನು ಸೇರ್ಪಡೆಗೊಳಿಸಲು ಯೋಜಿಸಿದ್ದು, ಈಗಾಗಲೇ ಸರಬರಾಜು ಹಂತದಲ್ಲಿರುತ್ತದೆ.<br>ಕೇಂದ್ರ ಸರ್ಕಾರದ ಭಾರಿ ಕೈಗಾರಿಕೆ ಇಲಾಖೆ, ಫೇಮ್-2 ಯೋಜನೆಯಡಿಯಲ್ಲಿ 300 ಎಲೆಕ್ಟ್ರಿಕ್ ಬಸ್ಸುಗಳನ್ನು GCC Model ಆಧಾರದ ಮೇಲೆ ಮತ್ತು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ 90 ಎಲೆಕ್ಟ್ರಿಕ್ ಬಸ್ಸುಗಳನ್ನು GCC Model ಆಧಾರದ ಮೇಲೆ ಕಾರ್ಯಾಚರಣೆ ಮಾಡಲು ಟೆಂಡರ್ ಆಹ್ವಾನಿಸಿದ್ದು ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 28 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು